
ಕಾರ್ಟೂನ್




ಹೆಲ್ತ್

## ಋತುಬಂಧ ಸಮಸ್ಯೆಗೆ ಆಕ್ಯುಪಂಚರ್

ಮಧ್ಯ ವಯಸ್ಸಿನ ಮಹಿಳೆಯರಲ್ಲಿ ಋತುಬಂಧದಿಂದ ಆಗುವ ಸಮಸ್ಯೆಗಳಿಗೆ ಆಕ್ಯುಪಂಚರ್ ಪರಿಹಾರ ನೀಡಲಿದೆ, ಎಂದು ವರದಿಯಾಗಿದೆ. ಹಾರ್ಮೋನುಗಳಲ್ಲಾಗುವ ಬದಲಾವಣೆಯಿಂದ ಆಗುವ ಋತುಬಂಧ ಹಾಗೂ ಅದರಿಂದ ಉಂಟಾಗುವ ಯಾತನೆ ಯಾರೊಂದಿಗೂ ಹೇಳಿಕೊಳ್ಳಲಾಗದಂಥ ಸ್ಥಿತಿಯಲ್ಲಿ ಕೆಲವರು ಇರುತ್ತಾರೆ.

ಇದನ್ನು ಗಮನದಲ್ಲಿಟ್ಟುಕೊಂಡು ತಜ್ಞರ ತಂಡವೊಂದು ಮಧ್ಯವಯಸ್ಸಿನ 53 ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿತು. ಇವರೆಲ್ಲರೂ ಒಂದು ವರ್ಷಗಳ ಹಿಂದೆ ಋತುಬಂಧಕ್ಕೊಳಪಟ್ಟವರು. ಈ ಸಂದರ್ಭದಲ್ಲಿ ವಿಪರೀತ ಹೊಟ್ಟೆ ನೋವು, ಉರಿ ಮೂತ್ರ, ಗುಪ್ತಾಂಗದಲ್ಲಿ ಉರಿ ಹಾಗೂ ಮಾನಸಿಕ ಖಿನ್ನತೆ ಇವರನ್ನು ಬಹುವಾಗಿ ಕಾಡಿತ್ತು.

ಈ 53 ಮಹಿಳೆಯರಿಗೆ ಚಿಕಿತ್ಸೆ ನೀಡುವ ಮೊದಲು ಅವರ ದೇಹದಲ್ಲಿ ಈಸ್ಟ್ರೋಜೆನ್ ಹಾರ್ಮೋನ್ ಪ್ರಮಾಣ, ಎಫ್‌ಎಸ್‌ಎಚ್ ಪ್ರಮಾಣ ಹಾಗೂ ಎಲ್‌ಎಚ್ ಪ್ರಮಾಣವನ್ನು ಅಳತೆ ಮಾಡಲಾಯಿತು. ಇವರಲ್ಲಿ 27 ಮಹಿಳೆಯರಿಗೆ ವಾರಕ್ಕೆ ಎರಡು ಬಾರಿಯಂತೆ 10 ವಾರಗಳ ಕಾಲ ಚೀನಾದ ಸಾಂಪ್ರದಾಯಿಕ ಚಿಕಿತ್ಸೆ ಆಕ್ಯುಪಂಚರ್ ನೀಡಲಾಯಿತು. ಸೂಜಿಗಳನ್ನು ಬಳಸಿ 20 ನಿಮಿಷಗಳ ಕಾಲ ನೀಡಲಾಗುವ ಈ ಚಿಕಿತ್ಸೆಯಲ್ಲಿ ಯಾವುದೇ ವಿದ್ಯುತ್ ಹಾಗೂ ಕೈಗಳನ್ನು ಬಳಸಲಾಗಿಲ್ಲ. ಇನ್ನುಳಿದವರಿಗೆ ಷಾಮ್ ಆಕ್ಯುಪಂಚರ್ ಚಿಕಿತ್ಸೆ ನೀಡಲಾಯಿತು.

ಈ ಚಿಕಿತ್ಸೆಯ ನಂತರ ಚೀನಾದ ಸಾಂಪ್ರದಾಯಿಕ ಆಕ್ಯುಪಂಚರ್ ಚಿಕಿತ್ಸೆ ಪಡೆದವರಲ್ಲಿ ಎಂಆರ್‌ಎಸ್ (ಸಮಸ್ಯೆಗಳ ಮಟ್ಟ) ಪ್ರಮಾಣ ಕಡಿಮೆಯಾಗಿತ್ತು. ಹೆಚ್ಚು ಲವಲವಿಕೆಯಿಂದ ಕಂಡುಬಂದರು. ಆದರೆ ಹತ್ತನೇ ವಾರದವರೆಗೂ ಉರಿ ಮೂತ್ರ ಸಮಸ್ಯೆ ಇತ್ತು. ಹಂತ ಹಂತವಾಗಿ ಅದೂ ಕೂಡಾ ಕಡಿಮೆಯಾಯಿತು. ಆದರೆ ಷಾಮ್ ಆಕ್ಯುಪಂಚರ್ ಚಿಕಿತ್ಸೆ ಪಡೆದವರಲ್ಲಿ ನಿರೀಕ್ಷಿತ ಫಲಿತಾಂಶ ಸಿಗಲಿಲ್ಲ.

ಚಿಕಿತ್ಸೆಯನ್ನು ಕಡಿಮೆ ಮಹಿಳೆಯರ ಮೇಲೆ ನಡೆಸಿದ್ದರಿಂದ ಇದರ ಫಲ ಎಷ್ಟು ದಿನ ಉಳಿಯುತ್ತೆ ಎಂದು ನಿರ್ಧರಿಸಲಾಗಿಲ್ಲ. ಆದರೆ ಋತುಬಂಧದ ನಂತರ ಬಳಲುವ ಮಹಿಳೆಯರಿಗೆ ಚೀನಾದ ಸಾಂಪ್ರದಾಯಿಕ ಆಕ್ಯುಪಂಚರ್ ಚಿಕಿತ್ಸೆ ಹೊರತುಪಡಿಸಿ ಬೇರೆ ಯಾವ ಉತ್ತಮ ಚಿಕಿತ್ಸೆ ಇಲ್ಲ ಎಂದು ಈ ವೈದ್ಯತಂಡ ಹೇಳಿದೆ.

## ಶೀಘ್ರಸ್ಖಲನಕ್ಕೂ ಚಿಕಿತ್ಸೆ

ಶೀಘ್ರಸ್ಖಲನ ಬಹುತೇಕ ಪುರುಷರ ಸಮಸ್ಯೆ. ಇವರನ್ನೇ ಗುರಿಯಾಗಿರಿಸಿಕೊಂಡು ಬಗೆ ಬಗೆಯ ಔಷಧಿಗಳನ್ನು ಕೊಟ್ಟು, ಹಣಕೀಳುವ ಡೋಂಗಿ ವೈದ್ಯರು ನಮ್ಮಲ್ಲಿದ್ದಾರೆ. ಆದರೆ ಈ ಸಮಸ್ಯೆಗೊಂದು ಪರಿಹಾರ ಇಲ್ಲಿದೆ. ಇದರ ಪ್ರಕಾರ ಮೆದುಳಿಗೆ ತೃಪ್ತಿ ಭಾವನೆ ಕಳುಹಿಸುವ ಸಂದೇಶವನ್ನು ತಡೆ ಹಿಡಿದರೆ ದೀರ್ಘಕಾಲದವರೆಗೂ ಮಿಲನ ಮಹೋತ್ಸವ ಆಚರಿಸಬಹುದು ಎಂದು ಡೈಲಿ ಮೇಲ್ ವರದಿ ಮಾಡಿದೆ.

ವಿಶ್ವದ ಪ್ರತಿ ಐವರಲ್ಲಿ ಒಬ್ಬ ಪುರುಷ ಶೀಘ್ರಸ್ಖಲನ ಸಮಸ್ಯೆಯಿಂದ ಬಳಲುತ್ತಿರುತ್ತಾರೆ. ಇವರ ಒಟ್ಟು ಸಂಭೋಗ ಸಮಯ 1.8 ನಿಮಿಷ ಮಾತ್ರ. ಅಮೆರಿಕದ ಕ್ಲೆವ್‌ಲ್ಯಾಂಡ್ ವಿಶ್ವವಿದ್ಯಾಲಯದ ಆಸ್ಪತ್ರೆಯ ವೈದ್ಯ ವಿಜ್ಞಾನಿಗಳು ಇದಕ್ಕೊಂದು ಪರಿಹಾರ ಕಂಡುಹಿಡಿದಿದ್ದಾರೆ.

ಶೀಘ್ರಸ್ಖಲನದಿಂದ ಬಳಲುತ್ತಿರುವವರಿಗೆ ಸ್ಥಳೀಯ ಅರಿವಳಿಕೆ ನೀಡಲಾಗುತ್ತದೆ. ಜತೆಗೆ ಅತ್ಯಂತ ಕಿರಿಯದಾದ ಸೂಜಿಯನ್ನು ಕಿಬ್ಬೊಟ್ಟೆಯ ಸಂದಿಯಲ್ಲಿ ಕಳುಹಿಸಲಾಗುತ್ತದೆ. ಮುಖ್ಯ ನರಮಂಡಲಕ್ಕೆ ಹೊಂದಿಕೊಂಡಿರುವ ಸಂವೇದನೆಯನ್ನು ನಿಯಂತ್ರಿಸುವ ಡ್ರಾಸಲ್‌ಪೆನಿಲ್ ನರವನ್ನು ತಾಗುವವರೆಗೂ ಸೂಜಿಯನ್ನು ತೂರಿಸಲಾಗುತ್ತದೆ. ಇದಕ್ಕೊಂದು ಪುಟ್ಟ ಎಲೆಕ್ಟ್ರೋಡ್ ಜೋಡಿಸಲಾಗಿರುತ್ತದೆ. ಅದಕ್ಕೊಂದು ಬ್ಯಾಟರಿ, ಡ್ರಾಸಲ್‌ಪೆನಿಲ್ ನರವನ್ನು ತಾಗಿದ ತಕ್ಷಣ ಸೂಜಿಯ ಗುಂಡಿಯನ್ನು ಒತ್ತಲಾಗುತ್ತದೆ. ಈ ಮೂಲಕ ತೀರಾ ಕಡಿಮೆ ವಿದ್ಯುತ್ ಅನ್ನು ಎಲೆಕ್ಟ್ರೋಡ್ ಮೂಲಕ ಹಾಯಿಸಿ ನರಕ್ಕೆ ಬಿಸಿ ನೀಡಲಾಗುತ್ತದೆ.

ಇದರಿಂದ ಸಂಭೋಗ ಸಂದರ್ಭದಲ್ಲಿ ತೃಪ್ತಿ ಭಾವ ಮೆದುಳಿಗೆ ರವಾನೆಯಾಗುವುದು ನಿಲ್ಲುತ್ತದೆ. ಜತೆಗೆ ಪುರುಷ ದೀರ್ಘ ಕಾಲದವರೆಗೂ ಮಿಲನ ಕ್ರಿಯೆಯಲ್ಲಿ ತೊಡಗಬಹುದು. ಈ ವಿಧಾನದ ಪ್ರಾಯೋಗಿಕ ಚಿಕಿತ್ಸೆಯನ್ನು ಅಮೆರಿಕದ ಕ್ಲೆವ್‌ಲೆಂಡ್ ವಿಶ್ವವಿದ್ಯಾಲಯದ ಆಸ್ಪತ್ರೆಯಲ್ಲಿ ನೀಡಲಾಗಿದೆ. ಆದರೆ ಈ ಚಿಕಿತ್ಸೆಯ ಅವಧಿ ಕೆಲವೇ ತಿಂಗಳುಗಳು ಮಾತ್ರ. ಏಕೆಂದರೆ ನರಗಳು ಪುನಃ ಸಹಜ ಸ್ಥಿತಿಗೆ ಮರಳುವುದರಿಂದ ಆನಂತರ ಮತ್ತೆ ಅದೇ ಸಮಸ್ಯೆ ಎದುರಾಗಬಹುದು ಎಂದು ವೈದ್ಯರು ಹೇಳುತ್ತಾರೆ.

■ ಇಎಸ್‌ಎಸ್